## ಶ್ರೀ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಸಂದರ್ಶನ ಸಮಿತಿ

೫೬೫ ಶ್ರೀ ಪೆಂಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಶ್ರೀ ಜಯದೇವ ಹೃದ್ರೋಗ ಸಂಸ್ಥೆಯ ಗವರ್ನಿಂಗ್ ಕೌನ್ಸಿಲ್ ಮತ್ತು ಸಂದರ್ಶನ ಸಮಿತಿ ಹಾಲಿ ಸದಸ್ಯರ ಹೆಸರುಗಳು.

ಆ) ಯಾವ ದಿನಾಂಕದಿಂದ ಸದರಿ ಸಮಿತಿಯನ್ನು ರಚಿಸಲಾಯಿತು?

ಇ) ಸದರಿ ಸಭೆಗಳನ್ನು ಪುನರ್ ರಚಿಸಿ ಅವುಗಳಲ್ಲಿ ಯುವಕರು ಮತ್ತು ಸಮಾಜಸೇವಕರುಗಳಿಗೆ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಡುವ ಪ್ರಸ್ತಾವನೆ ಇದೆಯೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)—

ಅ) ಅನುಬಂಧ-೧ರಲ್ಲಿ ನೀಡಲಾಗಿದೆ.

ಆ) ಸಂಸ್ಥೆಯ ಬೈಲಾನಲ್ಲಿ ಈ ರೀತಿಯ ಸಂದರ್ಶನ ಸಮಿತಿಗೆ ಅಸ್ಪದವಿಲ್ಲದಿರುವುದರಿಂದ ಯಾವುದೇ ಸಂದರ್ಶನ ಸಮಿತಿಯನ್ನು ರಚಿಸಿರುವುದಿಲ್ಲ.

ಇ) ೨೫-೫-೧೯೯೦ರಲ್ಲಿ.

ಈ) —ಇಲ್ಲ—

## ಪಶ್ಚಿಮ ಘಟ್ಟಗಳ ಅಭಿವೃದ್ಧಿ

೫೬೬ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಅರಣ್ಯ ಮತ್ತು ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

೧) ಕರ್ನಾಟಕದಲ್ಲಿ ಪಶ್ಚಿಮ ಘಟ್ಟಗಳ ಅಭಿವೃದ್ಧಿಗಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

೨) ಈ ಕಾರ್ಯಕ್ಕಾಗಿ ೧೯೮೯-೯೦ರಲ್ಲಿ ಎಷ್ಟು ಹಣವನ್ನು ನಿಗದಿಗೊಳಿಸಲಾಗಿತ್ತು?

೩) ಪ್ರಸಕ್ತ ಸಾಲಿನಲ್ಲಿ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ?

೪) ಈ ಯೋಜನೆಗಾಗಿ ಕೇಂದ್ರ ಸರ್ಕಾರದಿಂದ ಎಷ್ಟು ಮಂಜೂರಾಗಿದೆ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಸಚಿವರು).—

೧. ಪಶ್ಚಿಮ ಘಟ್ಟಗಳ ಅಭಿವೃದ್ಧಿಗಾಗಿ ಗ್ರಾಮೀಣ ಅಭಿವೃದ್ಧಿ ಮತ್ತು ಯೋಜನೆಯಿಂದ ಅರಣ್ಯ ಇಲಾಖೆಯ ಜಲಾನಯನ ಪ್ರದೇಶಗಳಲ್ಲಿ ಈ ಕೆಳಕಂಡ ಕಾಮಗಾರಿಕೆಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸದರಿ ಯೋಜನೆಯಂ ೯ ಜಿಲ್ಲೆಗಳಲ್ಲಿನ ೪೦ ತಾಲ್ಲೂಕುಗಳಿಗೂ ವಿಂಗಡಿಸಲಾಗಿದೆ.

೧) ಪಾರದರ್ಶಕ ಚೀಲಗಳಲ್ಲಿ ಸಸಿ ಬೆಳೆಸುವುದು ಹಾಗು ಪೋಷಿಸುವುದು.

೨) ನೆಡುತೋಪುಗಳನ್ನು ಬೆಳೆಸುವುದು. ಅದರಲ್ಲಿ ಬಿದಿರು, ತೇಗ ಶ್ರೀಗಂಧ, ಚಹಾ, ಗೇರು ಬೀಜ ಮತ್ತು ಮಿಶ್ರ ಜಾತಿಯ ಗಿಡಗಳ ನೆಡುತೋಪಿಗೆ ಆದ್ಯತೆ ನೀಡಲಾಗಿದೆ. ಬೋಳು ಗುಡ್ಡಗಳನ್ನು ಅರಣ್ಯೀಕರಿಸಲು ಕ್ರಮ ಕೈಗೊಳ್ಳಲಾಗಿದೆ.

೩) ಬೆಂಕಿಯಿಂದ ಅರಣ್ಯವನ್ನು ರಕ್ಷಿಸುವುದು ಹಾಗೂ ವೀಕ್ಷಣಾ ಗೋಪುರವನ್ನು ನಿರ್ಮಿಸುವುದು ಮತ್ತು ವನ್ಯಪ್ರಾಣಿಗಳ ಸಂರಕ್ಷಣೆ ಮತ್ತು ಅವುಗಳನ್ನು ಪೋಷಿಸುವುದು ಇತ್ಯಾದಿ.

೪) ಮಣ್ಣು ಹಾಗೂ ನೀರಿನ ಸಂರಕ್ಷಣೆ ಕಾರ್ಯ.

೫) ಆದಿವಾಸಿಗಳಿಗೆ ಸ್ಥಳೀಯ ಪರಿಶಿಷ್ಟ ಜಾತಿಯವರಿಗೆ ಮನೆಗಳನ್ನು ಕಟ್ಟಿಸುವುದು.

೬) ಆದಿವಾಸಿಗಳ ಬೇಡಿಕೆ ಪೂರೈಸುವಂಥ ವಿಶೇಷ ಜಾತಿಯ ಗಿಡಗಳನ್ನು ಬೆಳೆಸುವುದು.

೭) ಅರಣ್ಯ ಸಂಶೋಧನೆಯನ್ನು ಹೆಚ್ಚಿಸುವುದು.

೮) ವಂಶವಾಹಿನಿ ಸಂರಕ್ಷಣಾ ಕೇಂದ್ರವನ್ನು ಪ್ರಾರಂಭಿಸುವುದು.

೯) ಮರದ ತಳಿಯ ಸುಧಾರಣೆ ಕೆಲಸವನ್ನು ಕೈಗೊಳ್ಳುವುದು.

೨. ಸದರಿ ಯೋಜನೆಗಳಿಗೆ ಅರಣ್ಯ ಇಲಾಖೆಗೆ ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ ೧೯೯೯-೨೦ನೇ ಸಾಲಿಗೆ ರೂ. ೨೮೬.೫೬ ಲಕ್ಷಗಳನ್ನು ನಿಗಧಿಪಡಿಸಲಾಗಿತ್ತು. ಈ ಕೆಲಸ ಕಾರ್ಯಗಳನ್ನು ಜಿಲ್ಲಾಪರಿಷತ್ತುಗಳವತಿಯಿಂದ ನಡೆಸಲಾಗುತ್ತಿದೆ.

೩. (೧) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ ಗ್ರಾಮೀಣಅಭಿವೃದ್ಧಿ ಇಲಾಖೆಯು ಮುಖಾಂತರ ಅರಣ್ಯ ಇಲಾಖೆಗೆ ರೂ. ೨೯೦.೦೦ ಲಕ್ಷಗಳನ್ನು ಒದಗಿಸಿದೆ.

೨) ಬ್ರಿಟಿಷ್ ಸರ್ಕಾರದ ಸಾಗರೊತ್ತರ ನೆರವಿನಿಂದ ಯೋಜನೆಯೊಂದನ್ನು ತಯಾರಿಸಿದ್ದು ಇದಕ್ಕೆ ಇನ್ನು ಮಂಜೂರಾತಿ ಕೇಂದ್ರ ಸರ್ಕಾರದವರಿಂದ ದೊರಕಬೇಕಿದ್ದು, ಪ್ರಸ್ತುತ ವರ್ಷಕ್ಕೆ ರಾಜ್ಯ ಆಯವ್ಯಯದಲ್ಲಿ ರೂ. ೧೦ ಲಕ್ಷಗಳನ್ನು ನಿಗದಿಗೊಳಿಸಲಾಗಿದೆ.

೪. ಕೇಂದ್ರ ಸರ್ಕಾರವು ಮಂಜೂರು ಮಾಡಿರುವ ರೂ ೨೯೦.೦೦ ಲಕ್ಷ ರೂಪಾಯಿಗಳನ್ನು ಅರಣ್ಯ ಇಲಾಖೆಯ ಕಾಮಗಾರಿಗಳಿಗೆ ಗ್ರಾಮೀಣ ಅಭಿವೃದ್ಧಿ ಇಲಾಖಾವತಿಯು ಮುಂಚೇನ ಈ ಸಾಲಿಗೆ ಮಂಜೂರು ಮಾಡಿರುತ್ತಾರೆ.

## ನಾಗವಳ್ಳಿ ಮಂಡಲ ಪಂಚಾಯತ್ರಿಯವರು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು

೭೪೪ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

೧) ಸಂತೇಪರಹಳ್ಳಿಗೆ ಬರುವ ನಾಗವಳ್ಳಿ ಮಂಡಲ ಪಂಚಾಯತ್‌ಗೆ ಕಳೆದ ೩ ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯಗಳ ಸಲುವಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.

೨) ಈ ಹಣವನ್ನು ಪೂರ್ಣವಾಗಿ ಖರ್ಚು ಮಾಡಲಾಗಿದೆಯೇ?

೩) ಹಾಗಿದ್ದಲ್ಲಿ ಯಾವ ಯಾವ ಯೋಜನೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ.

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು)—

೧) ರೂ ೧೧,೫೬,೬೧೯-೦೦ ಗಳನ್ನು ಬಿಡುಗಡೆ ಮಾಡಲಾಗಿದೆ.
೨) ಇಲ್ಲ ರೂ ೭,೩೩,೧೫೯-೦೦ ಮಾತ್ರ ಖರ್ಚು ಮಾಡಲಾಗಿದೆ.
೩) ಯೋಜನೆವಾರು ಖರ್ಚು ಮಾಡಿದ ವಿವರಗಳನ್ನು ಈ ಕೆಳಗಿನಂತಿವೆ.

| | ಯೋಜನೆ ವಿವರ | ಖರ್ಚು ಮಾಡಿದ ಹಣ |
|---|---|---|
| ೧ | ಎನ್‌ಆರ್‌ಇಪಿ ಗುಂಪು ಮನೆ | ೭೬೫೦೯.೦೦ |
| ೨ | ಮಿಲಿಯನ್ಸ್ ವೆಲ್ | ೪೪೯೯.೦೦ |
| ೩ | ಜೆ. ಆರ್. ವೈ ಗುಂಪು ಮನೆ | ೨೨೦೦೦.೦೦ |
| ೪ | ಜೆ. ಆರ್.ವೈ ದಶಲಕ್ಷ ಭಾವಿ | ೧೭೦೦೦.೦೦ |
| ೫ | ವಿಶೇಷ ಘಟಕ ಗುಂಪು ಮನೆ | ೮೯೯೨.೦೦ |
| ೬ | ಜನತಾ ವಸತಿ ಯೋಜನೆ | ೯೦೫೬೪.೦೦ |
| ೭ | ಜೀತ ವಿಮುಕ್ತರ ಪುನರ್ ವಸತಿ | ೨೯೩೭೫೦.೦೦ |
| ೮ | ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ | ೬೮೩೩೫೦.೦೦ |
| | ಒಟ್ಟು | ೭೩೩೧೯.೦೦ |